

# ಪ್ರಾಣಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತವೆಯೇ?

**ಗುಂಪು ಗುಂಪಾಗಿ ಪ್ರಾಣಿ ಪಕ್ಷಿಗಳು ಸಾಯುವ ಘಟನೆಗಳ ನಿಜವಾದ ಕಾರಣಗಳನ್ನು ಕಂಡು ಹಿಡಿಯಲು ಈಗಲೂ ಆಗಿಲ್ಲ. ಈ ನಿಟ್ಟಿನಲ್ಲಿ ಸಂಶೋಧನೆಗಳು ನಡೆಯುತ್ತಲೇ ಇವೆ.**

**■ ಅನಿತಾ ಈ.**



ಪ್ರಾಣಿ ಮತ್ತು ಪಕ್ಷಿಗಳು ಮನುಷ್ಯರಂತೆ ಆತ್ಮಹತ್ಯೆ ಮಾಡಿಕೊಳ್ಳುತ್ತವೆ ಎಂದರೆ ನಂಬಲು ಸಾಧ್ಯವೇ? ಈ ವಿಚಾರದಲ್ಲಿ ವಿಶ್ವದಾದ್ಯಂತ ಚರ್ಚೆಗಳು ನಡೆಯುತ್ತಲೇ ಇವೆ. ಕೆಲವರು ತಮ್ಮದೇ ಆದ ವಾದಗಳನ್ನು ಮಂಡಿಸುವ ಮೂಲಕ ಅವುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತವೆ ಎಂದರೆ, ಹಲವರು ಆ ವಾದವನ್ನು ಸಂಪೂರ್ಣವಾಗಿ ತಳ್ಳಿ ಹಾಕುತ್ತಾರೆ. ಆದರೆ ಪ್ರಪಂಚದೆಲ್ಲೆಡೆ ಆಗಾಗ ಸಂಭವಿಸುವ ಪ್ರಾಣಿ– ಪಕ್ಷಿಗಳ ಸಾಮೂಹಿಕ ಸಾವು, ಕೆಲವೊಂದು ಪ್ರಭೇದಗಳಲ್ಲಿ ಕಂಡುಬರುವ ವಿಚಿತ್ರ ಸಾವಿನ ಪ್ರಕರಣಗಳಿಗೆ ಇಂದಿಗೂ ಸೂಕ್ತ ಕಾರಣಗಳು ತಿಳಿದು ಬಂದಿಲ್ಲ.

ಪ್ರಾಣಿ– ಪಕ್ಷಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತವೆಯೇ? ಅಥವಾ ಪರಿಸರ ಮಾಲಿನ್ಯ, ಮಾನವನ ಕಾಣದ ಕೈಗಳ ಕೈವಾಡ, ಅನಾರೋಗ್ಯದಿಂದ ಆಗುವ ನೋವು ಹಾಗೂ ಬಂಧನದಲ್ಲಿ ಇಡುವುದರಿಂದ ಆಗುವ ಹಿಂಸೆಯಿಂದ ಅವುಗಳು ಸಾಯುತ್ತವೆಯೋ? ಮಾನವನ ಕಾಣದ ಕೈಗಳ ಕೈವಾಡದಿಂದ ಆಗುವ ಸಾಕಷ್ಟು ಘಟನೆಗಳನ್ನು ಮುಚ್ಚಿಹಾಕಲೆಂದೇ ಅವುಗಳಿಗೆ ಆತ್ಮಹತ್ಯೆ ಎಂಬ ಹಣೆಪಟ್ಟಿ ಕಟ್ಟುವ ಸಾಧ್ಯತೆಗಳಿವೆ ಎನ್ನುತ್ತಾರೆ ಪರಿಸರವಾದಿಗಳು.

ಮರಿಗಳಿಗೆ ಜನ್ಮ ನೀಡುವ ತಾಯಿ ಜೇಡರ ಹುಳು, ಪೌಷ್ಟಿಕಾಂಶಯುಕ್ತ ಆಹಾರ ತಿಂದು ಮರಿಗಳು ಜೀವದಿಂದ ಇರಲಿ ಎಂದು ತಾನೇ ಮರಿಗಳಿಗೆ ಜೀವಂತ ಆಹಾರವಾಗುತ್ತದೆ ! ಜೀವಂತ ತಾಯಿಯನ್ನೇ ತಿಂದು ಬೆಳೆಯುವ ಈ ಪ್ರಕ್ರಿಯೆ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಇದನ್ನು ತಾಯಿ ಜೇಡ ಮಾಡಿಕೊಳ್ಳುವ ಆತ್ಮಹತ್ಯೆ ಎನ್ನಬಹುದೆ? ಅಮ್ಮನನ್ನು ಕೊಂದು ತಿನ್ನುವ ಮರಿಗಳನ್ನು ಕೊಲೆಗಾರರು ಎನ್ನಬಹುದೆ?

ಈ ಪ್ರಕ್ರಿಯೆಯನ್ನು ಆತ್ಮಹತ್ಯೆ ಹೌದೋ ಅಲ್ಲವೋ ಎಂದು ನಿರ್ಧರಿಸುವ ಮೊದಲು 'ಆತ್ಮಹತ್ಯೆ' ಎಂದರೆ ಏನು ಅರಿಯಬೇಕು. 'ಬೇಕೆಂದು ತನ್ನನ್ನು ತಾನೇ ಸಾಯಿಸಿಕೊಳ್ಳುವುದು' ಆತ್ಮಹತ್ಯೆ. ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಯೋಜನೆ ಮಾಡುವವರಿಗೆ ತಾವು ಜಗತ್ತಿನಲ್ಲಿ ಎಲ್ಲಿ, ಯಾವ ಪರಿಸ್ಥಿತಿಯಲ್ಲಿದ್ದೇವೆ ಎಂಬ ಅರಿವಿರಬೇಕು ಎನ್ನುತ್ತಾರೆ ತಜ್ಞರು.

'ವಿಜ್ಞಾನದಿಂದ ಪ್ರಾಣಿಗಳ ಆತ್ಮಹತ್ಯೆಗೆ ಕಾರಣ ಸಿಗುತ್ತದೆ. ಪ್ರಾಣಿಗಳಲ್ಲಿ ಮೇಲ್ನೋಟಕ್ಕೆ ಕಾಣುವ ನಡವಳಿಕೆಯಿಂದ ಪ್ರಾಣಿಗಳು ಎಷ್ಟು ದುಃಖದಲ್ಲಿವೆ ಎಂದು ತಿಳಿಯಬಹುದು. ಆದರೆ ಆ ದುಃಖದಿಂದ ಯಾವ ಪ್ರಮಾಣದ ಅಪಾಯ ಆಗಬಹುದು ಹಾಗೂ ಉದ್ದೇಶಪೂರ್ವಕವಾಗಿ ಅವುಗಳು ತಮಗೆ ಅಪಾಯವನ್ನು ಮಾಡಿಕೊಳ್ಳುತ್ತವೆಯೇ ಅಥವಾ ತಮಗೇ ಅರಿವಿಲ್ಲದಂತೆ ಅಪಾಯವನ್ನು ತಂದುಕೊಳ್ಳುತ್ತವೆಯೋ ಎಂದು ತಿಳಿಯಲು ವಿಜ್ಞಾನದಿಂದ ಸಾಧ್ಯವಿಲ್ಲ' ಎನ್ನುತ್ತಾರೆ ಅಮೆರಿಕದ ವರ್ಜಿನಿಯಾದಲ್ಲಿರುವ 'ಕಾಲೇಜ್ ಆಫ್ ವಿಲಿಯಂ ಆ್ಯಂಡ್ ಮೇರಿ'ಯದ ವಿಜ್ಞಾನಿ ಬಾರ್ಬರಾ ಕಿಂಗ್.